# ಕರ್ನಾಟಕ ಸರ್ಕಾರ

ಸಂಖ್ಯೆ: ಟಿಓಆರ್ 209 ಟಿಡಿಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: ~~04~~ 06-06-2022.

## ಜಂಟಿ ಸುತ್ತೋಲೆ

1. ಕರ್ನಾಟಕವು ಐತಿಹಾಸಿಕ, ಸಾಂಸ್ಕೃತಿಕ ಮತ್ತು ವಾಸ್ತುಶಿಲ್ಪದ ಪ್ರಾಮುಖ್ಯತೆವುಳ್ಳ ಅನೇಕ ತಾಣಗಳನ್ನು ಹೊಂದಿದೆ. ಪುರಾತನ ಸ್ಮಾರಕಗಳು, ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1958ರಡಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯು (ASI) ಕರ್ನಾಟಕದಲ್ಲಿ 506 ತಾಣಗಳನ್ನು ರಾಷ್ಟ್ರ ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಿದೆ.
2. ಪುರಾತನ ಮತ್ತು ಐತಿಹಾಸಿಕ ಸ್ಮಾರಕಗಳು ಹಾಗೂ ಪುರಾತತ್ವ ನೆಲೆಗಳು ಮತ್ತು ಅವಶೇಷಗಳ ಅಧಿನಿಯಮ, 1961ರಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕರ್ನಾಟಕದಲ್ಲಿ 844 ತಾಣಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಿದೆ.
3. ಎಷ್ಟೋ ಸ್ಮಾರಕಗಳು ಅನುದಾನದ ಕೊರತೆಯಿಂದಾಗಿ ನಿರ್ಲಕ್ಷಿತ ಸ್ಥಿತಿಯಲ್ಲಿರುತ್ತವೆ. ಅನೇಕ ಸ್ಥಳಗಳಲ್ಲಿ ಜಂಗಲ್ ಕ್ಲಿಯರೆನ್ಸ್ ಮತ್ತು ಫೆನ್ಸಿಂಗ್(ಸ್ಥಳೀಯ ವಾಸ್ತುಶೈಲಿಗೆ ಸೂಕ್ತವಾದ ವಸ್ತುವಿನಲ್ಲಿ)ನಂತಹ ಮೂಲಭೂತ ಕಾಮಗಾರಿಯನ್ನು ಕೈಗೊಳ್ಳಲಾಗಿಲ್ಲ. ಅನೇಕ ಸ್ಥಳಗಳಲ್ಲಿ, ಸಂರಕ್ಷಿತ ಸ್ಮಾರಕಗಳ ಪ್ರಮುಖ ಪ್ರದೇಶವನ್ನು ಮುಟ್ಟದೆ ಪ್ರವಾಸೋದ್ಯಮ ಇಲಾಖೆಯ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಸ್ವಚ್ಛತೆ, ನೆಡುತೋಪು, ರಕ್ಷಣೆ ಇತ್ಯಾದಿಗಳ ಸಣ್ಣ ಕೆಲಸಗಳನ್ನು ಕೈಗೊಳ್ಳಬಹುದು.
4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MGNREGA) ಕಾಯಿದೆ, 2005 ಅಡಿಯಲ್ಲಿ, ಭಾರತ ಸರ್ಕಾರವು lean season ನಲ್ಲಿ ಗ್ರಾಮೀಣ ಉದ್ಯೋಗಿಗಳಿಗೆ ಉದ್ಯೋಗದ ಭರವಸೆ ನೀಡಲು ವಾರ್ಷಿಕ ರೂ. 6,680.60 ಕೋಟಿಗಳನ್ನು ವೆಚ್ಚ ಮಾಡುತ್ತಿದ್ದು, ಕರ್ನಾಟಕ ರಾಜ್ಯವು ವಾರ್ಷಿಕ ರೂ. 694 ಕೋಟಿಗಳ ರಾಜ್ಯದ ಪಾಲನ್ನು ಒಳಗೊಂಡಂತೆ ರೂ.7,352 ಕೋಟಿಗಳನ್ನು ಈ ಯೋಜನೆಯಡಿ ವ್ಯಯಿಸುತ್ತಿದೆ.
5. MGNREGA ಒಮ್ಮುಖದಿಂದ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣೆ ಸಂರಕ್ಷಿತ ಮತ್ತು ರಾಜ್ಯ ಪುರಾತತ್ವ ಸಂರಕ್ಷಿತ ಸ್ಮಾರಕಗಳ ರಕ್ಷಣೆಯನ್ನು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸಕ್ರಿಯ ಭಾಗವಹಿಸುವಿಕೆಯಿಂದ ಸಾಧಿಸಬಹುದು.
6. ಉದ್ಯೋಗ ಸೃಷ್ಟಿಗೆ ಲಭ್ಯವಿರುವ MGNREGA ನಿಧಿಗಳು ಮತ್ತು ವಿವಿಧ ಸಂರಕ್ಷಣಾ ಕಾರ್ಯಗಳನ್ನು ಈ ಕೆಳಗಿನಂತೆ ಸದರಿ ಪ್ರದೇಶಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಫಲಪ್ರದವಾಗಿ ಬಳಸಬಹುದು ಎಂದು ಪ್ರಸ್ತಾಪಿಸಲಾಗಿದೆ:

   (i) ಸಂರಕ್ಷಿತ ಸ್ಮಾರಕದ ಪ್ರದೇಶವನ್ನು ಮೀಸಲಿಡಲು ಮತ್ತು ಭವಿಷ್ಯದಲ್ಲಿ ಯಾವುದೇ ಅತಿಕ್ರಮಣಗಳಿಂದ ರಕ್ಷಿಸಲು ಮತ್ತು ಪ್ರದೇಶಕ್ಕೆ ಜಾನುವಾರು ಮತ್ತು ಪ್ರಾಣಿಗಳ ಚಲನೆಯನ್ನು ತಪ್ಪಿಸಲು ಜೈವಿಕ-ಬೇಲಿಯನ್ನು ಮಾಡಬೇಕು.

   (ii) ಸಂರಕ್ಷಿತ ಪ್ರದೇಶದಲ್ಲಿ ಕಲ್ಯಾಣಿ/ಪುಷ್ಕರಣಿ/ಬಾವಿ ಇತ್ಯಾದಿ ರೂಪದಲ್ಲಿ ನೀರಿನ ಸಂಗ್ರಹಣೆಯ ಮೂಲವಿದ್ದರೆ, ಆ ರಚನೆಯ ಪಾರಂಪರಿಕ ಮೌಲ್ಯಕ್ಕೆ ಧಕ್ಕೆಯಾಗದಂತೆ DTDC ಯ ಸಲಹೆಯನ್ನು ಅನುಸರಿಸಿ ಅದನ್ನು ಪುನಃಸ್ಥಾಪಿಸಬೇಕು.

   (iii) ಸಂರಕ್ಷಿತ ಸ್ಮಾರಕಗಳ ಸುತ್ತಲೂ MGNREGA ಅಡಿಯಲ್ಲಿ ಪರಿಸರ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಬಹುದು.

..2..



Generated from eOffice by LOKESH C.D., RDPR-GM(LCD), GAZATED MANAGER (ADMINISTRATION), RDPR SEC on 27/06/2022 10:58 AM

(iv) ಪ್ರವಾಸೋದ್ಯಮ ಇಲಾಖೆಯು ಗ್ರಾಮ ಪಂಚಾಯತ್ ಅಥವಾ ಹೊರಗುತ್ತಿಗೆ ಏಜೆನ್ಸಿಯಿಂದ ನಡೆಸಬಹುದಾದ ಶೌಚಾಲಯಗಳು, ಕುಡಿಯುವ ನೀರು, ಸಣ್ಣ ಉಪಾಹಾರ ಗೃಹ ಇತ್ಯಾದಿಗಳಂತಹ ಪ್ರವಾಸೋದ್ಯಮ ಸೌಕರ್ಯಗಳ ಸೃಷ್ಟಿಗೆ ಕೊರತೆಯಾಗುವ ಹಣವನ್ನು ಒದಗಿಸುತ್ತದೆ. ಪ್ರವಾಸೋದ್ಯಮ ಇಲಾಖೆಯು ಸೈಟ್‌ಗಳಿಗೆ ಸಂಬಂಧಿಸಿದಂತೆ ಬೋರ್ಡ್‌ಗಳು ಮತ್ತು ಮಾಹಿತಿ ಸಾಮಗ್ರಿಗಳನ್ನು ಸಹ ನೀಡುತ್ತದೆ.

7. ಅಂತಹ ಕಾಮಗಾರಿಗಳನ್ನು 3 ತಿಂಗಳಿಗೊಮ್ಮೆ ಪರಿಶೀಲಿಸಲು ರಾಜ್ಯ ಮಟ್ಟದಲ್ಲಿ ಕೆಳಗಿನ ಸಮಿತಿಯನ್ನು ರಚಿಸಬಹುದು.

| | |
|---|---|
| (i) ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ | - ಅಧ್ಯಕ್ಷರು |
| (ii) ಆಯುಕ್ತರು, MGNREGA | - ಸದಸ್ಯರು |
| (iii) ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | - ಸದಸ್ಯ ಕಾರ್ಯದರ್ಶಿ |

(ಎಲ್.ಕೆ.ಅತ್ತೀಕ್) 6/6/2022
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

4/6/22
(ಪಂಕಜ್ ಕುಮಾರ್ ಪಾಂಡೆ)
ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

ಇವರಿಗೆ:

1. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
4. ಆಯುಕ್ತರು(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
5. ಆಯುಕ್ತರು(ಗ್ರಾಮೀಣಾಭಿವೃದ್ಧಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಇನ್ ಫ್ಯಾಂಟ್ರಿ ರಸ್ತೆ, ಬೆಂಗಳೂರು
7. ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು.
8. ಶಾಖಾರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ.
3. ಸರ್ಕಾರದ ಉಪ ಕಾರ್ಯ ದರ್ಶಿಯವರ ಆಪ್ತ ಸಹಾಯಕರು, ಪ್ರವಾಸೋದ್ಯಮ ಇಲಾಖೆ

*****